ಸ ವೈ ತದೈವ ಪ್ರತಿಪಾದಿತಾಂ ಗಿರಾಂ
ದೈವೀಂ ಪರಿಜ್ಞಾತಪರಾತ್ಮನಿರ್ಣಯಃ ।
ತಂ ಭಕ್ತಿಭಾವೋಽಭ್ಯಗೃಣಾದಸತ್ವರಂ
ಪರಿಶ್ರುತೋರುಶ್ರವಸಂ ಧ್ರುವಕ್ಷಿತಿಃ ॥ ೪.೯.೫ ॥

"ಮುಂದೆ ಧ್ರುವತ್ವವನ್ನು ಪಡೆಯಬೇಕಾದ ಆ ಬಾಲಕನು ಶಂಖಸ್ಪರ್ಶದಿಂದ ಬ್ರಹ್ಮ ಮತ್ತು ಜೀವರ ಸ್ವರೂಪ ಜ್ಞಾನದಿಂದ ತುಂಬಿದವನಾಗಿ, ಧೈರ್ಯದಿಂದ, ಭಕ್ತಿಭಾವದಿಂದ ಜಗ ದ್ವಂದ್ಯನಾದ ಶ್ರೀಹರಿಯನ್ನು ಸ್ತುತಿಸತೊಡಗಿದನು."

ಯೋಽಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ
ಪುರುಷಾಯ ತುಭ್ಯಮ್ ॥೪.೯.೬॥

"ಓ ಸರ್ವಶಕ್ತನೇ, ನೀನೇ ನನ್ನ ಮನಸ್ಸನ್ನು ಪ್ರವೇಶಿಸಿ, ನಿನ್ನ ಶಕ್ತಿಯ ಮೂಲಕ, ಪ್ರಸುಪ್ತವಾದ ನನ್ನ ವಾಕ್‌ಶಕ್ತಿಯನ್ನು ಸಜೀವಗೊಳಿಸಿದೆ ಮತ್ತು ನನ್ನ ಕೈ, ಕಾಲು, ಕಿವಿ, ಚರ್ಮಾದಿ ಇಂದ್ರಿಯ ಮತ್ತು ಪ್ರಾಣಗಳಿಗೆ ಶಕ್ತಿಯನ್ನು ನೀಡಿದೆ. ಭಗವಂತನಾದ, ಎಲ್ಲರ ಆತ್ಮನಾದ ನಿನಗೆ ನಮಿಸುತ್ತೇನೆ."

ಭಾಗವತ ಹೇಳುತ್ತದೆ, "ಶ್ರೀಹರಿಯು ಕೃಪೆಯಿಂದ ಬ್ರಹ್ಮಮಯ ಶಂಖದಿಂದ ಬಾಲಕನ ಕೆನ್ನೆಯನ್ನು ಸ್ಪರ್ಶಿಸಿದನು" ಎಂದು. ತಕ್ಷಣವೇ ಧ್ರುವನ ಮನಸ್ಸಿನಲ್ಲಿ ಅಸಾಧ್ಯ ಜ್ಞಾನೋದಯವಾಯಿತು, ಮತ್ತು ಅವನು ಅದ್ಭುತವಾಗಿ ಭಗವಂತನನ್ನು ಸ್ತುತಿಸತೊಡಗಿದನು. ಇದು ಧ್ರುವನ ಕಥೆ.

ನಾವು ಯಾವುದನ್ನು ಧ್ರುವನಕ್ಷತ್ರ (pole star) ಎಂದು ಕರೆಯುತ್ತೇವೆಯೊ ಅದು ಈ ಬಾಲಕ ಧ್ರುವನಿಗೆ ಸಂಬಂಧಿಸಿದುದು. ಭಗವಂತನು ಬಾಲಕನಿಗೆ ಧ್ರುವನಕ್ಷತ್ರದ ಉನ್ನತ ಪದವಿಯನ್ನು ನೀಡಿದನು.

# ಪ್ರಹಸನ ಪ್ರಸಂಗ

ಸ್ವಾಮಿ ಅಶೋಕಾನಂದರು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದಲ್ಲಿರುವ ರಾಮಕೃಷ್ಣ ವೇದಾಂತ ಕೇಂದ್ರದ ಮುಖ್ಯಸ್ಥರಾಗಿ ಬಹಳ ಕಾಲ ಸೇವೆ ಸಲ್ಲಿಸಿದವರು. ಅವರು ಅನೇಕ ಆಧ್ಯಾತ್ಮಿಕ ಅನುಭವಗಳನ್ನು ಪಡೆದವರು, ಪ್ರಕಾಂಡ ಪಂಡಿತರು. ಉತ್ತಮ ವಾಗ್ಮಿಗಳು ಮತ್ತು ಶಕ್ತಿಶಾಲಿ ಬರಹಗಾರರು. ಅವರ ಲೇಖನಗಳು ಮತ್ತು ಉಪನ್ಯಾಸಗಳು ಅನೇಕ ರೂಪದಲ್ಲಿ ಪ್ರಕಟವಾಗಿವೆ. ಅವರು ಹಾಸ್ಯಪ್ರಿಯರೂ ಕೂಡ.

ಅವರು ಅಮೆರಿಕಕ್ಕೆ ಹೋಗುವುದಕ್ಕೆ ಮುಂಚೆ ಮದರಾಸಿನಿಂದ ಕಲಕತ್ತಕ್ಕೆ ರೈಲಿನಲ್ಲಿ ಹೋಗುತ್ತಿದ್ದರು. ಅವರು ಪ್ರಯಾಣಿಸುತ್ತಿದ್ದ ವಿಭಾಗದಲ್ಲಿ ಒಬ್ಬರು ಹಿರಿಯ ವ್ಯಕ್ತಿ ಕುಳಿತಿದ್ದರು, ತುಂಬ ಮಾತುಗಾರರು. ತಾವೇನಾಗಿಲ್ಲವೊ ಅದನ್ನು ತೋರ್ಪಡಿಸುವುದಕ್ಕೇ ಅವರ ಎಲ್ಲ ಮಾತುಗಳು. ಈಗ ಸನ್ಯಾಸಿಗಳೊಬ್ಬರ ಮುಂದೆ ತಾನು ಒಬ್ಬ ಧಾರ್ಮಿಕ ವ್ಯಕ್ತಿ ಎಂದು ತೋರಿಸಿಕೊಳ್ಳಬೇಡವೆ? ತಮ್ಮೆಲ್ಲ ಪುಸ್ತಕ ಜ್ಞಾನವನ್ನು ಉಪಯೋಗಿಸಿ ಮಾತಿನ ಹೊಳೆಯನ್ನು ಹರಿಸಿದರು. ಆ ವಿಭಾಗದಲ್ಲಿ ಕುಳಿತಿದ್ದ ಪ್ರಯಾಣಿಕರೆಲ್ಲರೂ ಇಷ್ಟವಿಲ್ಲದಿದ್ದರೂ ಅವರ ಮಾತನ್ನು ಕೇಳಲೇಬೇಕಿತ್ತು, ಏಕೆಂದರೆ ಅವರು ಗಟ್ಟಿಯಾಗಿ ಮಾತನಾಡುತ್ತಿದ್ದರು.

ರಾತ್ರಿಯಾಗಿ ಮಲಗುವ ಸಮಯವಾಯ್ತು. ಸ್ವಾಮಿ ಅಶೋಕಾನಂದರ ಹತ್ತಿರ ಕಾವಿ ಬಟ್ಟೆಯ ಹೊದಿಕೆಯಿದ್ದ ಒಂದು ತಲೆದಿಂಬು ಇತ್ತು. ಆ "ಧಾರ್ಮಿಕ ವ್ಯಕ್ತಿ"ಯ ಹತ್ತಿರ ತಲೆದಿಂಬು ಇರಲಿಲ್ಲ. ಅವರು ಅಶೋಕಾನಂದರನ್ನು ತಮಗೆ ಆ ತಲೆದಿಂಬನ್ನು ಕೊಡಬೇಕೆಂದು ಕೇಳಿದರು.

ಸಂನ್ಯಾಸಿಗಳಲ್ಲದವರು ಕಾವಿಬಟ್ಟೆಯನ್ನು ಉಪಯೋಗಿಸುವುದು ಉಚಿತವಲ್ಲವಾದುದರಿಂದ ಅಶೋಕಾನಂದರು ಆ ದಿಂಬನ್ನು ಕೊಡಲು ನಿರಾಕರಿಸಿದರು.

ಆಗ ಆ 'ಧಾರ್ಮಿಕ ವ್ಯಕ್ತಿ', "ನಾನೂ ಮಾನಸಿಕವಾಗಿ ಸಂನ್ಯಾಸಿಯೇ" ಎಂದರು.

ಅಶೋಕಾನಂದರು ತಕ್ಷಣವೇ, "*ಹಾಗಾದರೆ ಈ ತಲೆದಿಂಬನ್ನೂ ನೀವು ಮಾನಸಿಕವಾಗಿಯೇ ಉಪಯೋಗಿಸಿ*" ಎಂದುಬಿಟ್ಟರು.

ಅಲ್ಲಿದ್ದ ಪ್ರಯಾಣಿಕರೆಲ್ಲರೂ ಜೋರಾಗಿ ನಕ್ಕರು. ಆ ವ್ಯಕ್ತಿ ಪೆಚ್ಚುಮೋರೆ ಹಾಕಿಕೊಂಡು ಸುಮ್ಮನಾದರು. ಆದರೆ ಮುಂದೆ ಸ್ವಾಮಿ ಅಶೋಕಾನಂದರು ಈ ಘಟನೆಯನ್ನು ನೆನಸಿಕೊಂಡು, ತಾನು ಆ ರೀತಿ ಮಾತನಾಡಿ ಆ ವ್ಯಕ್ತಿಯ ಮನಸ್ಸನ್ನು ನೋಯಿಸಬಾರದಿತ್ತು ಎಂದು ಪಶ್ಚಾತ್ತಾಪ ಪಡುತ್ತಿದ್ದರು.